**CW : 2**

PW : 2

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.499/23

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಹೆಚ್ ಶಂಕರ್ ಭಂಡಾರಿ |
| ತಂದೆಯ ಹೆಸರು | : | ಶ್ರೀ ಮಹಾಬಲ ಭಂಡಾರಿ |
| ಪ್ರಾಯ | : | 62 ವರ್ಷ |
| ಉದ್ಯೋಗ | | ಪ್ರೈವೇಟ್ ಕಂಪನಿಯಲ್ಲಿ ಕೆಲಸ, |
| ವಾಸಸ್ಥಳ | : | ಪಾಂಡುರಂಗ ನಗರ, ಬೆಂಗಳೂರು |

ದಿನಾಂಕಃ **30.04.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ1 ನನ್ನ ಹೆಂಡತಿ. 1ನೇ ಆರೋಪಿ ನನ್ನ ಹೆಂಡತಿಯ ತಮ್ಮ. ಪುತ್ತೂರಿನಲ್ಲಿ ನಾವು ಡಿಂಬ್ರಿ ಮನೆ ಕುರಿಯಾ ಗ್ರಾಮದಲ್ಲಿ ಇರುತ್ತೇವೆ. ಅಲ್ಲಿ ನನ್ನ ಹೆಂಡತಿಗೆ ಆಕೆಯ ತವರು ಮನೆಯಿಂದ ಬಂದಿರುವ ಸ್ವತ್ತು ಇರುತ್ತದೆ. ಅದರ ಸರ್ವೆ ನಂ 152/2 ಆಗಿರುತ್ತದೆ.

ದಿ.27.12.2022 ರಂದು ನಮ್ಮ ಮನೆಗೆ ಸೌಮ್ಯ ಎನ್ನುವವರು ತೋಟದ ಕೆಲಸಕ್ಕೆ ಬಂದಿದ್ದರು. ಆಕೆ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ನಾನು ಮನೆಯ ಅಂಗಳದಲ್ಲಿದ್ದೆ. ಸುಮಾರು ಮ.3 ಗಂಟೆಸಮಯದಲ್ಲಿ ನನ್ನ ಹೆಂಡತಿ ಮನೆಯ ಹತ್ತಿರ ಇದ್ದ ಅಡಿಕೆ ತೋಟದಲ್ಲಿ ಬೊಬ್ಬೆ ಹೊಡೆಯುವುದು ಕೇಳಿಸಿತು. ಆಗ ನಾನು ಬೊಬ್ಬೆ ಶಬ್ದ ಕೇಳಿಸಿದ ಸ್ಥಳಕ್ಕೆ ಹೋದೆನು. ನಾನು ಅಲ್ಲಿ ಹೋಗಿ ನೋಡಿದಾಗ ಸ್ಥಳದಲ್ಲಿ ಅರುಣ ಕುಮಾರ, ತನ ಕೆಲಸದವರಾದ ಸುಂದರ, ವಿನಯ ಇದ್ದರು. ಅವರು ನನ್ನ ಹೆಂಡತಿಯನ್ನು ಉದ್ದೇಶಿಸಿ ಬೇರ್ವಸಿ ಮುಂಡೆ ನಿನ್ನನ್ನು ಮತ್ತು ನಿನ್ನ ಗಂಡನನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಹೇಳಿ ಅಲ್ಲಿಂದ ಹೊರಟು ಹೋದರು. ಸ್ಥಳದಲ್ಲಿ ನನ್ನ ಹೆಂಡತಿ ಬಿದ್ದಿದ್ದರು. ನಾನು ಆಕೆಯ ಹತ್ತಿರ ಹೋಗಿ ವಿಚಾರ ಮಾಡಿದೆನು. ಅಷ್ಟರಲ್ಲಿ ಅಲ್ಲಿಗೆ ನಮ್ಮ ಕೆಲಸದವರಾದ ಸೌಮ್ಯ ಸಹ ಬಂದರು. ನಾನು ಮತ್ತು ಸೌಮ್ಯ ಸೇರಿ ನನ್ನ ಹೆಂಡತಿಯನ್ನು ಉಪಚರಿಸಿ ಮನೆಗೆ ಕರೆದುಕೊಂಡು ಬಂದೆವು.

ಮನೆಯಲ್ಲಿ ನಡೆದ ವಿಚಾರ ಏನು ಎಂದು ನನ್ನ ಹೆಂಡತಿಯನ್ನು ಕೇಳಿದೆನು. ಆಗ ಆಕೆ ನಾನು ತೋಟಕ್ಕೆ ಹೋಗಿದ್ದಾಗ ಅರುಣ ಕುಮಾರ ಹಾಗೂ ಆತನ ಕೆಲಸದವರಾದ ಸುಂದರ ಮತ್ತು ವಿನಯ 3 ಜನ ನಮ್ಮ ತೋಟಕ್ಕೆ ತಂತಿ ಬೇಲಿಯನ್ನು ಹಾಕುತ್ತಿದ್ದರು ಅದನ್ನು ನಾನು ಪ್ರಶ್ನಿಸಿದಾಗ ಅರುಣ ಕುಮಾರ ನನ್ನನ್ನು ಉದ್ದೇಶಿಸಿ ಬೇರ್ವಸಿ ಮುಂಡೆ ಎಂದು ಬೈದು ನಿನಗೆ ನನ್ನ ಇನ್ನೊಂದು ಮುಖವನ್ನು

ತೋರಿಸುತ್ತೇನೆ, ನಿನ್ನನ್ನು ಮತ್ತು ನಿನ್ನ ಗಂಡನನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಹೇಳಿ ಕಾಲಿನಿಂದ ನನ್ನ ಹೆಂಡತಿಯ ಹೊಟ್ಟೆಗೆ ಒದ್ದು ಆಕೆಯನ್ನು ಕೆಳಕ್ಕೆ ಬೀಳಿಸಿ ಆಕೆಯ ಮುಖಕ್ಕೆ, ಬೆನ್ನಿಗೆ ಹಾಗೂ ಕತ್ತಿಗೆ ಕಾಲಿನಿಂದ ಒದ್ದು ಕೈನಿಂದ ಆಕೆ ತೊಟ್ಟಿದ್ದ ನೈಟಿಯನ್ನು ಎಳೆದು ಹರಿದು ಆಕೆಯ ಮಾನಭಂಗ ಮಾಡಿ ಕೈಯಿಂದ ಆಕೆಯ ಮುಖಕ್ಕೆ ಗುದ್ದಿದ ಬಗ್ಗೆ ಹೇಳಿದರು.

ನನ್ನ ಹೆಂಡತಿಯ ಎದೆಯಲ್ಲಿ ತರಚಿದಗಾಯ ಆಗಿತ್ತು, ಕತ್ತಿಗೆ ಹಾಗೂ ಬೆನ್ನಿಗೆ ಜೋರಾದ ಗಾಯ ಆಗಿತ್ತು. ನಂತರ ನಾನು ನನ್ನ ಹೆಂಡತಿಯನ್ನು ಪುತ್ತೂರಿನ ಆದರ್ಶ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿದ್ದು ಅಲ್ಲಿ ಆಕೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ. ನನ್ನ ಹೆಂಡತಿಗೆ ನೀಡಿದ್ದ ಜಾಗದಲ್ಲಿ ಅರುಣ ಕುಮಾರಗೆ ಹೆಚ್ಚು ಪಾಲು ಬರಬೇಕೆಂದು ಹೇಳಿ ತಕರಾರು ಮಾಡಿ ಆ ಜಾಗಕ್ಕೆ ಅರುಣಕುಮಾರ ಅಕ್ರಮ ಪ್ರವೇಶ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿರುತ್ತಾರೆ.

ಪೋಲಿಸರು ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದಾರೆ. ಘಟನಾ ದಿನ ನನ್ನ ಹೆಂಡತಿ ಧರಿಸಿದ್ದ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಸಮ್ಮುಖ ಹಾಜರುಪಡಿಸಲಾದ ನೈಟಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃಆರೋಪಿ ಪರ ವಕೀಲರಿಂದಃ

ಆರೋಪಿತರ ಪರ ಮಾನ್ಯ ವಕೀಲರು ಸಾಕ್ಷಿಯ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ರೂ 2000/- ಖರ್ಚಿನೊಂದಿಗೆ ಸಮಯಾವಕಾಶ ನೀಡಲಾಗಿದೆ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.